sdmimd

## Prajavani

**Date:** March 26, 2016 **Page No.** 3A

**Edition:** Mysuru **Language: Kannada**

# ಹೊಸ ಕಲಿಕೆಗೆ ಸದಾ ತುಡಿತವಿರಲಿ

## ಎಸ್‌ಡಿಎಂ– ಐಎಂಡಿ ಘಟಿಕೋತ್ಸವದಲ್ಲಿ ಉದ್ಯಮಿ ಅರುಣ್ ಮೈರಾ ಸಲಹೆ

ಪ್ರಜಾವಾಣಿ ವಾರ್ತೆ

ಮೈಸೂರು: ಯುವಕರು ಹೊಸ ಕಲಿಕೆಗೆ ಸದಾ ಮುಕ್ತರಾಗಿರಬೇಕು. ಆಗಲೇ ಹೊಸ ಸಂಶೋಧನೆಗಳನ್ನು ನಡೆಸಲು ಸಾಧ್ಯವಾಗುತ್ತದೆ ಎಂದು ಯೋಜನಾ ಆಯೋಗ ಹಾಗೂ ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್‌ನ ಮಾಜಿ ಸದಸ್ಯ ಅರುಣ್ ಮೈರಾ ಕಿವಿಮಾತು ಹೇಳಿದರು.

ಎಸ್‌ಡಿಎಂ- ಐಎಂಡಿ ಸಂಸ್ಥೆಯು ಶುಕ್ರವಾರ ಏರ್ಪಡಿಸಿದ್ದ '21ನೇ ವರ್ಷದ ಘಟಿಕೋತ್ಸವ ಸಮಾರಂಭ'ದಲ್ಲಿ ಅವರು ಮುಖ್ಯ ಭಾಷಣ ಮಾಡಿದರು.

ಜೀವನದ ಪ್ರತಿಕ್ಷಣದಲ್ಲೂ ಹೊಸತನ್ನು ಕಲಿಯುವ ಪ್ರಯತ್ನ ಮಾಡುತ್ತಲೇ ಇರಬೇಕು. ವಿದ್ಯಾರ್ಥಿ ಜೀವನದಲ್ಲಿ ಕಲಿಯುವುದು ಕೇವಲ ಪಠ್ಯ ಜ್ಞಾನವನ್ನು ಮಾತ್ರ. ಪ್ರಾಯೋಗಿಕ ಜ್ಞಾನ ಸಿಗುವುದು ವೃತ್ತಿಗೆ ಸೇರಿದ ಬಳಿಕವೇ. ಈ ಕಾರಣದಿಂದ ವಿದ್ಯಾರ್ಥಿ ಜೀವನ ಮುಗಿದ ಮೇಲೂ ಕಲಿಕೆ ಮುಂದುವರಿಸಬೇಕು ಎಂದರು.

**ಮುಖ್ಯಾಂಶಗಳು**

- ಹೊಸ ವಿಚಾರ ಕಲಿಕೆಯಿಂದ ನಾಯಕತ್ವ ವೃದ್ಧಿ
- ಉದ್ಯೋಗ ಸೃಷ್ಟಿ ದೊಡ್ಡ ಸವಾಲು
- ಹಣ ಸಂಪಾದನೆಗಾಗಿ ಮೌಲ್ಯ ಬಿಡಬಾರದು

ಇಷ್ಟೇ ಅಲ್ಲದೇ, ನಿರಂತರ ಕಲಿಕೆಯಿಂದ ಹೊಸ ಆವಿಷ್ಕಾರಗಳನ್ನು ಮಾಡುವುದು ಸಾಧ್ಯವಾಗುತ್ತದೆ. ಹೊಸ ವಿಚಾರಗಳು ಇತರರಿಗಿಂತ ವಿಭಿನ್ನವಾದ ವ್ಯಕ್ತಿತ್ವವನ್ನು ನೀಡುತ್ತವೆ. ಇದರ ಜತೆಗೆ, ನಾಯಕತ್ವದ ಗುಣವನ್ನು ರೂಢಿಸಿಕೊಳ್ಳುವುದು ಇದರಿಂದ ಸಾಧ್ಯವಾಗುತ್ತದೆ ಎಂದು ಅವರು ಸಲಹೆ ನೀಡಿದರು.

**ಉದ್ಯೋಗ ಸೃಷ್ಟಿಗೆ ಆದ್ಯತೆ:** ಭವಿಷ್ಯದಲ್ಲಿ ಅಪಾರ ಸಂಖ್ಯೆಯ ಯುವಕರಿಗೆ ಉದ್ಯೋಗವನ್ನು ಸೃಷ್ಟಿಸುವುದು ದೊಡ್ಡ ಸವಾಲಾಗಿ ಪರಿಣಮಿಸಲಿದೆ. ಇದನ್ನು ಸರ್ಕಾರಗಳು ಆದ್ಯತೆ ಎಂದು ಪರಿಗಣಿಸಿ, ಉದ್ಯೋಗ ಸೃಷ್ಟಿಗೆ ಒತ್ತು ನೀಡಬೇಕು. ಹೊಸ ತಂತ್ರಜ್ಞಾನಗಳ ಬಳಕೆಗೆ ಒತ್ತು ನೀಡಬೇಕು. ಆಗ ಉದ್ಯೋಗ ಸೃಷ್ಟಿ ಸುಲಭವಾಗುತ್ತದೆ. ಕಾಲಕ್ಕೆ ತಕ್ಕಂತೆ ಅಂತರರಾಷ್ಟ್ರೀಯ ಮಾನದಂಡಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಹೊಸ ಉದ್ಯೋಗಗಳ ಸೃಷ್ಟಿ ಸುಲಭವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

'ಭಾರತದಂತಹ ಶ್ರೇಷ್ಠ ರಾಷ್ಟ್ರದಲ್ಲಿ ನಾವಿದ್ದೇವೆ. ಇಲ್ಲಿನ ಇತಿಹಾಸವನ್ನು ಮೆಲುಕು ಹಾಕುತ್ತ, ದೇಶದ ಶ್ರೀಮಂತ ಪರಂಪರೆಯನ್ನು ಅಳವಡಿಸಿಕೊಳ್ಳುವ ಕೆಲಸವನ್ನು ಯುವಕರು ಮಾಡಬೇಕು. ಸೃಜನಾತ್ಮಕ, ಮಾನವೀಯ ಆಶಯಗಳನ್ನು ಅಳವಡಿಸಿಕೊಳ್ಳಬೇಕು. ಅಹಿಂಸೆಯನ್ನು ನಡೆ- ನುಡಿಗಳೆರಡರಲ್ಲೂ ಅಳವಡಿಸಿಕೊಳ್ಳಬೇಕು' ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು.

ವಿಶ್ವವಿದ್ಯಾನಿಲಯಗಳು ಡಿಜಿಟಲ್ ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡಬೇಕು. ಇಡೀ ವಿಶ್ವವೇ ಈಗ ಡಿಜಿಟಲ್ ಕಲಿಕೆಯನ್ನು ಅವಲಂಬಿಸಿದೆ. ವಿಶ್ವವಿದ್ಯಾನಿಲಯಗಳು ತಮ್ಮ ಸಾಂಪ್ರದಾಯಿಕ ಶಿಕ್ಷಣದ ಜತೆಗೆ, ಡಿಜಿಟಲ್ ಕಲಿಕಾ ವಿಧಾನವನ್ನೂ ಅಳವಡಿಸಿಕೊಂಡರೆ ಜಾಗತಿಕವಾಗಿ ತಲೆ ಎತ್ತಿನಿಲ್ಲಲು ಭಾರತಕ್ಕೆ ಸಾಧ್ಯವಾಗುತ್ತದೆ ಎಂದರು.

ಎಸ್‌ಡಿಎಂ- ಐಎಂಡಿ ಸಂಸ್ಥೆಯ ಅಧ್ಯಕ್ಷ ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿ, 'ವೃತ್ತಿಯಲ್ಲಿ ಸಾಧನೆ ಮಾಡಬೇಕು ನಿಜ. ಆದರೆ, ಅದಕ್ಕಾಗಿ ಅಡ್ಡದಾರಿಗಳನ್ನು ಹಿಡಿಯಕೂಡದು. ಹಣ ಸಂಪಾದನೆಗಾಗಿ ಮೌಲ್ಯಗಳನ್ನು ಮಾರಿಕೊಳ್ಳಬಾರದು' ಎಂದು ಕಿವಿಮಾತು ಹೇಳಿದರು.

ಘಟಿಕೋತ್ಸವದಲ್ಲಿ 170 ಮಂದಿಗೆ 'ವಾಣಿಜ್ಯ ನಿರ್ವಹಣೆ ಸ್ನಾತಕೋತ್ತರ ಡಿಪ್ಲೊಮಾ ಪದವಿ' ವಿತರಿಸಲಾಯಿತು. ಕೃತಿ ಶುಕ್ಲಾ, ನೀತೂ ಪ್ರಭಾಕರನ್, ದ್ರೋಣಮ್ ರಾಜು, ಅನುರಾಗ್ ಎಸ್. ಸಾಹಾಪುರ್ ಅವರಿಗೆ ಚಿನ್ನದಪದಕಗಳನ್ನು ವಿತರಿಸಲಾಯಿತು.